# ನೀವು ಕೇಳಿದಿರಿ?

ಬಸವಣ್ಣ ಹೆಬ್ಬಳಗೆರೆ, ಚನ್ನಗಿರಿ

*ಬೆಕ್ಕು ಯಾಕೆ ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುತ್ತದೆ ಸಾರ್?*



ಕಲಬೆರಕೆ, ಕೀಳುಮಟ್ಟದ ಹಾಲಿನ ವಾಸನೆಗೆ ಕಿಕ್ ಏರಿ ಕಣ್ಣು ತಾನಾಗೇ ಮುಚ್ಚಿಕೊಂಡುಬಿಡುತ್ತದಂತೆ!

ಡೈರಿ ವಿಶ್ವನಾಥ್, ಬೆಂಗಳೂರು

*ಗಾಂಧಿನಗರದಲ್ಲಿ ಗಾಂಧಿಗಿರಿ ನಡೆಯುತ್ತಾ?*

ಸ್ವಲ್ಪ ವ್ಯತ್ಯಾಸದೊಂದಿಗೆ ಸ್ವಲ್ಪವೇ ನಡೆಯುತ್ತದೆ– ಪೂಜಾಗಾಂಧಿಗಿರಿ!

ಮಹೇಶ ಈರಣ್ಣ, ಲಿಂಗಸೂಗೂರು

*ಸತ್ಯವಂತರನ್ನು ಸುಲಭವಾಗಿ ಹೇಗೆ ಗುರುತಿಸಬಹುದು?*

ಮುಖದಲ್ಲಿ ಎದ್ದುಕಾಣುವ ಮೊದ್ದು ಕಳೆಯಿಂದ!

ಆರ್.ಮಧುಸೂದನ್, ಹಾಸನ

*ಗಡಿಯಾರದ ಮುಳ್ಳಿಗೂ, ಹೆಣ್ಣಿನ ಮಾತುಗಳಿಗೂ ಏನು ವ್ಯತ್ಯಾಸ?*

ಅದು ಸೂಚಿಸುವುದು ಸಮಯ, ಇದು ರಸಮಯ!

ಶ್ಯಾಮಸುಂದರ, ಬೆಂಗಳೂರು

*ಎತ್ತು ಏರಿಗೆ, ಕೋಣ ನೀರಿಗೆ; ಮಂತ್ರಿಯಾದವ ಏರಿಗೆ, ಮಂತ್ರಿಯಾಗದವ?*



ಬಾರಿಗೆ!

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ

*ಮೈಸೂರು ಮಲ್ಲಿಗೆಗೂ, ಮಂಗಳೂರು ಮಲ್ಲಿಗೆಗೂ ಇರುವ ವ್ಯತ್ಯಾಸ...?*

ಮಂಗಳೂರು ಮಲ್ಲಿಗೆ ಪಟಕ್ಕೆ ಮಾತ್ರ ಸೀಮಿತ. ಮೈಸೂರು ಮಲ್ಲಿಗೆ ಪಟಕ್ಕಲ್ಲದೆ ಪುಟಪುಟಕ್ಕೂ ಪ್ರಸ್ತುತ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಕಂಠಕ್ಕೂ, ಸೊಂಟಕ್ಕೂ ಏನು ವ್ಯತ್ಯಾಸ?*

ಕಂಠ ಶ್ರೀಮಂತವಾಗಿರಬೇಕು, ಸೊಂಟ ಬಡವಾಗಿರಬೇಕು!

ಜಯದೇವ ಹಲಕಿ, ಗೋಕಾಕ

*ಉತ್ತರಿಸಲಾಗದ ಪ್ರಶ್ನೆ ಕೇಳಿದರೆ ಏನು ಮಾಡುತ್ತೀರಿ ರಾಮ್‌ಜೀ?*

ಎಲ್ಲಿ, ಕೇಳಿ ನೋಡೋಣ...! ಇದುವರೆಗೂ ಯಾರೂ ಅಂತಹ ಪ್ರಶ್ನೆ ಕೇಳಿಯೇ ಇಲ್ಲ!

ಡಿ.ಎಸ್. ಪಂಕಜಸುಬ್ರಮಣ್ಯಂ, ಬೆಂಗಳೂರು

*ಸತ್ಯ, ಹಾಸ್ಯ, ವ್ಯಂಗ್ಯದಿಂದ ಕೂಡಿರುವ ತಮ್ಮ ಉತ್ತರಗಳು ನಿಮ್ಮ ಸ್ವಂತ ಬುದ್ಧಿಯವೋ ಅಥವಾ ಸಹಾಯ ಪಡೆಯುವಿರೋ...?*

ಇರಿ, ಇರಿ. ಈ ಉತ್ತರಗಳಲ್ಲಿ ಸತ್ಯ, ಹಾಸ್ಯ, ವ್ಯಂಗ್ಯಗಳಿವೆ ಎಂಬುದು ನಿಮ್ಮ ಸ್ವಂತ ಬುದ್ಧಿಗೆ ಹೊಳೆಯಿತೋ, ಬೇರೆಯವರು ಹೇಳಿದರೋ?

ಕುಮಾರ ಚಲವಾದಿ, ಶಿರಸಿ

*ಹೆಣ್ಣು ಮಾಯೆ ಆದರೆ ಗಂಡು?*

ಮಾಯಾಮೃಗ!

ಪಿ.ಜೆ. ರಾಘವೇಂದ್ರ, ಮೈಸೂರು

*ಅಧಿಕಾರದ ಅಮಲಿಗೂ, ಕಳ್ಳಭಟ್ಟಿಯ ಅಮಲಿಗೂ ಏನು ವ್ಯತ್ಯಾಸ?*

ಅಧಿಕಾರದ ಅಮಲಿನಲ್ಲಿ ವ್ಯಕ್ತಿ ಮೆಂಟಲ್ ಆಗ್ತಾನೆ, ಕಳ್ಳಭಟ್ಟಿಯ ಅಮಲಿನಲ್ಲಿ ವ್ಯಕ್ತಿ ಸೆಂಟಿಮೆಂಟಲ್ ಆಗ್ತಾನೆ!

ಸುಮ ಜಿ. ಭಾರತಿನಗರ

*ಮನುಷ್ಯರಿಗಿಂತ ನಾಯಿ ನಿಯತ್ತಿನ ಪ್ರಾಣಿ ಅಂತಾರೆ. ಆದರೆ ನಾಯಿಗಿಂತ ನಿಯತ್ತಿನ ಪ್ರಾಣಿ ಯಾವುದು?*

ಆಗರ್ಭಶ್ರೀಮಂತನ ಏಕೈಕ ಅಳಿಯ!

ವಿ.ಹಮೀದ್, ವಿಟ್ಲ

*ತಾಯಿಗಿಂತ ದೇವರಿಲ್ಲ, ಪತ್ನಿಗಿಂತ...?*

ಜಾಣೆಯಿಲ್ಲ! ಇಡೀ ಗಂಡ ಕುಲ ಯುದ್ಧದಲ್ಲಿ ನಾಶವಾದಾಗಲೆಲ್ಲಾ ಜಗದ ತೊಟ್ಟಿಲು ತೂಗಿದ್ದೇ ಪತ್ನಿ ಕುಲ!

ಎನ್.ಎಸ್. ಆನಂದ್, ಬೆಂಗಳೂರು

*ತಂದೆಗೆ ತಲೆ ಬಗ್ಗಿಸದವನು ಕ್ಷೌರಿಕನಿಗೆ ಬಗ್ಗಿಸುತ್ತಾನಲ್ಲಾ...?*

ಸರಿಯೇ. ತಂದೆಯೇ ಇವನ ಮುಂದೆ ತಲೆ ಬಾಗಬೇಕು. ತಂದೆಗೆ ಸೂಪರ್ ಆಗಿ ಬೋಳಿಸುವವನು ಇವನೇ ಅಲ್ಲವೇ!

## ಬಹುಮಾನಿತ ಪ್ರಶ್ನೆ

ಎ.ಎಸ್.ಸ್ವಾಮಿ ಪತ್ರಿಮಠ, ಕಬಾಡಗೇರಾ

*ಪ್ರತಿಯೊಬ್ಬ ವ್ಯಕ್ತಿಗೂ ಒಂದು ಹೆಸರು ಇರಲೇಬೇಕೆ?*

ಹುಟ್ಟುತ್ತಲೇ ಪೊಲೀಸ್ ಪೇದೆಯೋ, ಖೈದಿಯೋ ಆಗಿ ಹುಟ್ಟಿದರೆ ನಂಬರ್‍ರೇ ಸಾಕು!

ಗಣೇಶ ಎಂ. ಪೈ, ಚಿಕ್ಕಮಗಳೂರು

*ಚಪ್ಪಲಿಗಳನ್ನು ಏರ್ ಕಂಡೀಷನ್ಡ್ ಅಂಗಡಿಗಳಲ್ಲಿ; ತರಕಾರಿ, ಹಣ್ಣುಗಳನ್ನು ರಸ್ತೆ ಬದಿಯಲ್ಲಿ ಮಾರಾಟ ಮಾಡಲಾಗುತ್ತದಲ್ಲಾ...?*

ನಂತರದ ಯೋಗಾಯೋಗಗಳೇ ಸುಂದರ! ಖರೀದಿಯ ನಂತರ ಚಪ್ಪಲಿ ಎಂದೂ ಹೊರಗೆ; ತರಕಾರಿ, ಹಣ್ಣು ಎಂದೂ ಒಳಗೆ!

ಆರಿಫ್, ದಾವಣಗೆರೆ

*ಕೆಲವು ಹುಡುಗಿಯರು ಸುಮ್ಮಸುಮ್ಮನೆ ಉಗುರು ಕಚ್ಚಿಕೊಳ್ಳುತ್ತಿರುತ್ತಾರಲ್ಲಾ, ಏಕೆ?*

ಹೊಸ ಉಗುರು ಹಳೆ ಹಲ್ಲು ಕೂಡಿರಲು ಬಲು ಸೊಗಸಂತೆ!

ಎನ್. ವಸಂತಾ, ಕತ್ತರಿಗುಪ್ಪ

*ವಿವಾಹವಾಗದವನನ್ನು ನವಿಲಿಗೂ, ವಿವಾಹವಾದವನನ್ನು ಕತ್ತೆಗೂ ಹೋಲಿಸುವುದೇಕಣ್ಣಾ?*



ಸರಿಯೇ; ಮೊದಲು ಅವನ ಪಾಡಿಗೆ ಕುಣಿದುಕೊಂಡಿದ್ದು, ನಂತರ ಪತ್ನಿಯ ಶಾಪಿಂಗ್ ಹೊರೆ ಹೊರುತ್ತಾನಲ್ಲ!

ಎಚ್.ಆರ್. ಕಡಿವಾಲ, ಬದಾಮಿ

*ಪ್ರೇಮವಿವಾಹಗಳು ಹೆಚ್ಚಾಗಲು ಕಾರಣವೇನು?*

ಪ್ರೇಯಸಿಯೇ; ಸುಮ್ಮನೆ ಲವ್ ಮಾಡ್ಕೊಂಡಿರೋಣಾಂದ್ರೆ ಕೇಳೋದೇ ಇಲ್ಲ!

ಶ್ರೀಮತಿ ಸುನಂದಮ್ಮ, ಗೌರಿಬಿದನೂರು

*ಹುಟ್ಟುವಾಗ ಪ್ರೀತಿ, ಪ್ರೇಮ, ರಕ್ಷಣೆಗಳನ್ನು ಕೊಡುವ ಅಮ್ಮ ಇರುತ್ತಾಳೆ. ಸಾಯುವಾಗ...?*

ಮಾತ್ರೆ, ಇಂಜೆಕ್ಷನ್, ಡ್ರಿಪ್ಸ್‌ಗಳನ್ನು ನೀಡುವ ನರ್ಸಮ್ಮ!

■ ರಾಮ್